“ಪೇಪರು ಓದ್ತಾ ಕೂತಿರು ನೀನು. ನಂಗೊಂಚೂರು ಕೆಲ್ಸ ಉಂಟು. ಮದರಂಗಿ ಅರೆದಿಟ್ಟಿದೀನಿ, ತಲೆಗೆ ಹಚ್ಕೊಳ್ಳೋಕೆ...” ಅಂದಿದ್ದಳು ಪ್ರಭಾವತಿ.

“ನೀನೇ ಹಚ್ಕೋತೀಯಾ?”

“ಮತ್ತೆ? ಅದಕ್ಕೊಂದು ಜನ ಇಟ್ಕೊಳ್ಲಾ?”

“ಹಚ್ಚಲೇನೇ ನಾನು? ಹೆಂಗೂ ಪುರುಸೊತ್ತುಂಟು...”

“ಥೂ ನಿನ್ನ. ಕೈಯೆಲ್ಲಾ ಬಣ್ಣ ಆಗುತ್ತೆ ಮಾರಾಯಾ. ಯಾರಾರೂ ಕೇಳಿದ್ರೆ ಏನಂತಿ?”

“ನಾದಿನಿಗೆ ಬಣ್ಣ ಹಾಕಿ ಬಂದೆ ಅಂತೀನಿ...”

“ಅಕ್ಕ ಹಿಡಿಕುಂಟೆ ತಗಂತಾಳೆ...”

“ಯಾಕೆ ತಗಂತಾಳೆ? ಅದೇನು ತಲೆ ಹೋಗುವಂತಾ ಅಪರಾಧಾನಾ?”

ಮಾವನೇನು ಹೊಸಬನಾ? ಚೋಟುದ್ದ ಇದ್ದಾಗಿನಿಂದ ನೋಡಿ ಗೊತ್ತಿದ್ದವನು. ಎರಡು ಪ್ಲಾಸ್ಟಿಕ್ ಕವರು ಹುಡುಕಿ ತಂದುಕೊಟ್ಟಿದ್ದಳು ಪ್ರಭಾವತಿ. “ಇದನ್ನ ಕೈಗೆ ಹಾಕ್ಕೋ, ಬಣ್ಣ ಆಗಲ್ಲ...” ಅಂದಿದ್ದಳು.

ಇದೇ ಇದೇ ಹಿತ್ತಲ ಜಗುಲಿಯಲ್ಲಿ ಅವಳು ಕಾಲು ಇಳಿಬಿಟ್ಟುಕೊಂಡು ಕೂತಿದ್ದಳು. ಹಿಂದೆ ಒಂದು ಸ್ಟೂಲ್ ಹಾಕಿಕೊಂಡು ಕೂತ ಶೀನಿ ಮಾವ ಅವಳ ತಲೆಗೂದಲಿಗೆ ಆಸ್ಥೆಯಿಂದ ಮದರಂಗಿ ಹಚ್ಚತೊಡಗಿದ್ದ. “ಹೊಸ ವಿದ್ಯೆ ಕಲಿತಂಗ್ಹಾಯ್ತು ಮಾರಾಯ್ತೀ...” ಎಂದು ಅವನಿಗೆ ಉಮೇದು. “ನೀವು ಹೆಣ್ಣುಮಕ್ಕಳು ಸಮಾಧಾನಿಗಳಪ್ಪಾ. ದಿನಾ ಇಷ್ಟುದ್ದ ಕೂದಲು ಬಾಚಿ ಜಡೆ ಹಾಕ್ಕೋ ಅಂದ್ರೆ ಹುಡುಗಾಟಾನಾ?” ಅಟ್ಟ ಹತ್ತಿಸಿದ್ದ.

“ನೀವು ಗಡ್ಡ, ಮೀಸೆ ಅಂತ ಒದ್ಗಳಲ್ವಾ? ಇದೂ ಹಂಗೇನೇ...” ಪ್ರತ್ಯುತ್ತರಿಸಿದ್ದಳು ಪ್ರಭಾವತಿ. ಕುಶಾಲಿನ ಮಾತು. ನಗೆ. ಸದಾ ತೆರೆದೇ ಇಟ್ಟಿರುತ್ತಿದ್ದ ಮುಂಚೇಕಡೆಯ ಬಾಗಿಲಿನಿಂದ ಶ್ರೀಪಾದ ಒಳಗೆ ಬಂದವನು ಜಗುಲಿಯ ವರೆಗೆ ಬಂದಿದ್ದು ಇಬ್ಬರಿಗೂ ಗೊತ್ತಿಲ್ಲ. ಗೊತ್ತಿದ್ದರೂ ಅದರಲ್ಲಿ ಹೆದರಿಕೆಯೋ, ಹಿಂಜರಿಕೆಯೋ, ಮುಜುಗರವೋ ಆಗುವಂತಹದ್ದು ಏನೋ ಇರುತ್ತದೆಯೆಂದು ಇಬ್ಬರಿಗೂ ಅನಿಸಿರಲಿಲ್ಲ. ಅವನನ್ನು ಮೊದಲು ನೋಡಿದ ಶೀನಿ ಮಾವ,

“ಮಾರಾಯಾ, ನೋಡು, ನಿನ್ನ ಹೆಂಡ್ತಿಗೆ ಮದರಂಗಿ ಹಚ್ತಿದೀನಿ. ಯಾವತ್ತಾರೂ ನಿನ್ಕೈಲಿ ಈ ಕೆಲಸ ಮಾಡ್ಸಿದಾಳಾ ನಿನ್ಹೆಂಡ್ತಿ? ಸೋದರಮಾವ ಅಂದ್ರೆ ಎಷ್ಟು ಸಸಾರ ನೋಡು” ಅಂದಿದ್ದ. ಹಿಂದಿರುಗಿ ನೋಡಲು ಸಾಧ್ಯವಾಗಿರಲಿಲ್ಲ ಪ್ರಭಾವತಿಗೆ. ಜುಟ್ಟು ಮಾವನ ಕೈಲಿತ್ತು.

“ಏನ್ರೀ, ಕಾಫಿ ಬೇಕನ್ರೀ? ಒಲೆಬುಡದಲ್ಲಿಟ್ಟಿದೀನಿ ನೋಡಿ. ಬೇಕೂಂತಾದ್ರೆ ಕುಡೀರಿ...” ಪ್ರಭಾವತಿ ಸಹಜವಾಗಿ ಹೇಳಿದ್ದಳು.

ತುಟಿ ಒಡೆಯದೆ ಒಳಗೆ ಹೋಗಿದ್ದ ಶ್ರೀಪಾದ.

“ಮಾತಾಡಿದ್ರೆ ಮುತ್ತು ಸುರಿಯುತ್ತೆ ಅನ್ನೋ ಹಂಗಾಡ್ತಾನಪ್ಪಾ ನಿನ್ನ ಗಂಡ...” ಕೀಟಲೆ ಮಾತಾಡಿದ್ದ ಮಾವ.

“ಮುತ್ತಲ್ಲ ಸುರಿಯೋದು, ಕವಳದ ರಸ...” ಅಂದಿದ್ದಳು ಪ್ರಭಾವತಿ.

ಇಷ್ಟೇ, ಇಷ್ಟೇ ನಡೆದಿದ್ದು. ಅಭ್ಯಾಸವಿಲ್ಲದವನು ಅಗ್ನಿಕಾರ್ಯ ಮಾಡಿದಂತೆ ತಲೆಗೆ ಮದರಂಗಿ ಮೆತ್ತಿದ್ದ ಶೀನಿ ಮಾವ. ಕೈಗೆ ಕಟ್ಟಿಕೊಂಡಿದ್ದ ಕವರನ್ನು ಕಿತ್ತು ಬಿಸಾಕಿ, ಒಂದಷ್ಟು ಹೊತ್ತು ಪೇಪರಿನ ಪರಿಶೀಲನೆ ಮಾಡಿ, ಊಟದಮನೆಗೆ ಎದ್ದು ಹೋಗಿದ್ದ.

ಪ್ರಭಾವತಿ ಯಾವತ್ತಿನಂತೆ ಅಡುಗೆಗೆ ಇಟ್ಟಿದ್ದಳು. ಊಟದ ಹೊತ್ತಿಗೆ ಶ್ರೀಪಾದ ಮನೆಗೆ ಬಂದಿದ್ದ. ಮದರಂಗಿ ಹಚ್ಚಿಕೊಂಡಿದ್ದ ತಲೆಯನ್ನು ತೊಳೆದುಕೊಂಡಿರಲಿಲ್ಲ ಪ್ರಭಾವತಿ. ಇಳಿಸಂಜೆಯಾಗುವ